ಎಷ್ಟೋ ಬಾರಿ ಸೌಂದರ್ಯ ಕೊಟ್ಟ ದೇವರು ನಮಗೆ ಒಳ್ಳೆ ಸೀರೆಯ ಭಾಗ್ಯ ಕರುಣಿಸದೇ, ಆ ಮಡಿಕೋಲಿಗೆ ಕರುಣಿಸಿ ಬಿಟ್ಟಿದ್ದಾನಲ್ಲ ಎನ್ನುವ ಅಸೂಯೆಯೇ ಹೆಂಗಸರ ಆಡಿಕೊಳ್ಳುವಿಕೆ, ಸೋಟೆ ತಿರುವುವುದರಲ್ಲಿ ಮುಖ್ಯವಾಗಿರ್ತಿತ್ತೇನೋ.

ಕೊನೆಯ ಕೊಂಡಿಗಳು, ಮ್ಯೂಸಿಯಂ ಪೀಸ್‌ಗಳ ತರಹ ಅಲ್ಲೊಂದು ಇಲ್ಲೊಂದು ಉಳಿದಿದ್ದಾರೆ ಎನಿಸುತ್ತದೆ. ಇವರ ಮನೇಲಂತೂ ಮಡಿಕೋಲು ಇದ್ದೇ ಇರತ್ತೆ ಅಂತಾ ನನ್ನ ಬಲವಾದ ನಂಬಿಕೆ. ಆದರೂ ಈ ನಡುವೆ ಇಂಥಾ ಅಪರೂಪದ 'ಆಂಟಿಕ್ ಪೀಸ್'ಗಳನ್ನು ಬಿಟ್ಟರೆ ಮಡಿ ಸ್ವಲ್ಪ ಕಾವು, ಜೋರು ಕಳೆದು ಕೊಂಡಿರುವುದಂತೂ ನಿಜ.

ಶ್ರೀ ವೈಷ್ಣವರಲ್ಲಿ ಕೋಲ್ಮಡಿ ಎಂಬೊಂದು ಪ್ರಕಾರದ ಮಡಿಯೂ ಉಂಟು. ಈ ವಿಷಯದಲ್ಲಿ ಸ್ಮಾರ್ತರನ್ನು ಸ್ವಲ್ಪ ಕಟ್ಟರ್ ಪಂಥಿಗಳು ಎನ್ನಬಹುದು. ಶ್ರೀ ವೈಷ್ಣವರನ್ನು ಉದಾರಿಗಳು ಅಥವಾ ಮೋರ್ ಪ್ರಾಕ್ಟಿಕಲ್ ಎನ್ನಬಹುದೇನೋ. ಶ್ರೀ ವೈಷ್ಣವರಿಗೆ ಮಡಿಕೋಲು ಮಡಿಯ ಅವತಾರ. ಹಾಗಾಗಿ, ತಾವು ಸ್ನಾನ ಮಾಡದೇ ಇದ್ದರೂ, ಮಡಿಕೋಲಿನಿಂದ ಎಳೆದುಕೊಂಡ ಬಟ್ಟೆಗಳು ಮಡಿಯೇ. ಮಡಿಕೋಲ ತುದಿಯಲ್ಲಿ ವಿಜಯ ಪತಾಕೆಯಂತೆ, ಯತಿಗಳ ದಂಡದ ತುದಿಯ ವಸ್ತ್ರದಂತೆ ಸಾಗಿ, ಸ್ನಾನದ ಕೋಣೆಯೋ, ದೇವರ ಕೋಣೆಯೋ ಎಲ್ಲಿ ಬೇಕಾದರು ಮಡಿಯಾಗಿಯೇ ಇರಬಲ್ಲದು. ಗೊರೂರು ರಾಮಸ್ವಾಮಿ ಅಯ್ಯಂಗಾರರ 'ನಮ್ಮೂರ ರಸಿಕರು' ಪುಸ್ತಕದಲ್ಲಿ ಬರುವ ನಿಶಾನೆ ಮಣೆಗಾರರನ್ನು ನೆನೆಪಿಸಿಕೊಂಡರೆ ಈ ಕೋಲ್ಮಡಿಯ ಸ್ವಾರಸ್ಯ ಅರ್ಥವಾಗತ್ತೆ. ಈ ನಿಶಾನೆ ಅಥವಾ ಬಾವುಟದ ಮಣೇಗಾರ್ರು ಶ್ರೀ ವೈಷ್ಣವರು. ಮದುವೆಯಾಗದ ಒಬ್ಬಂಟಿ. ಹಾಗಾಗಿ, ಸ್ನಾನಕ್ಕೆ ಮನೇಲಿ ಹಂಡೆಗೆ ಉರಿಹಾಕಿ ಬಿಸಿನೀರಿನ ತಂಟೆಗೆ ಹೋದವರಲ್ಲ. ಆದರೆ, ಸ್ನಾನಕ್ಕೆಂದು ಮಡಿಕೋಲಿನ ತುದಿಗೆ ಚೌಕವನ್ನು ಸಿಕ್ಕಿಸಿಕೊಂಡು, ಹೋಗಿ ಊರಲ್ಲಿ ಯಾರೋ ಒಬ್ಬರ ಮನೇಲಿ ಸ್ನಾನ ಮಾಡಿ ಮಡಿಚೌಕ ಉಟ್ಟು ಬರೋರಂತೆ. ಈಗ ಗೊತ್ತಾಯಿತೇ ಶ್ರೀ ವೈಷ್ಣವರ ಕೋಲ್ಮಡಿಯ ಪ್ರತಾಪ? ಆದರೆ, ಸ್ಮಾರ್ತರಿಗೆ ಹಾಗಲ್ಲ. ಅವರಿಗೆ ಮಡಿಕೋಲು ಕೇವಲ ಬಿದಿರ ಗಣೆಯಷ್ಟೇ. ಅದಕ್ಕೆ ಮಡಿ ಎಂಬುದು ಆರೋಪಿತ ತತ್ವ. ಅದನ್ನು ಮುಟ್ಟುವವರೂ ಸ್ನಾನದಿಂದ ಮಡಿಯಾಗಿದ್ದರೆ ಮಾತ್ರವೇ ಕೋಲಿನಲ್ಲೂ ಮಡಿತನ ವಿದ್ಯುತ್‌ನಂತೆ ಹರಿದು ಅದನ್ನು ಶಕ್ತಿಶಾಲಿಯಾಗಿಸುವುದು. ಇಲ್ಲದಿದ್ದರೆ ಅದು ನಾಯಿ ಓಡಿಸುವ ಕೋಲಿಗೆ ಸಮ. ಹೀಗೆ ಮಡಿಕೋಲಲ್ಲೇ, ರೂಪ ಒಂದೇ ಆಗಿದ್ದರೂ ಸ್ವರೂಪ ವ್ಯತ್ಯಾಸ. ಅವರವರ ಭಾವಕ್ಕೆ ಅವರವರ ಭಕುತಿಗೆ ತಕ್ಕಂತೆ ಈ ಮಡಿಕೋಲಲ್ಲಿ ಮಡಿತ್ವದ ಆರೋಪ. ಈ ಮಡಿಯ ವಿಧಿ–ನಿಷೇಧಗಳ ಅವಾಂತರ, ಕುಣಿತ, ಮಡಿ ಸರಿಯಾಗಿ ಮಾಡದೇ ಹೋದರೆ ಮನೆಗೆ ಹಾವು–ಚೇಳುಗಳು ಬರುತ್ತವೆ ಅಂತಾ ಹೆದರಿಸೋ ಅರ್ಥವಾದಗಳು ಎಲ್ಲಾ ನಾನು ಕಂಡಂತೆ ಹೆಂಗಸರಲ್ಲೇ ಜಾಸ್ತಿ ಇರ್ತಾ ಇತ್ತು. ಹೀಗೆಲ್ಲಾ, ಇನ್ನೂ ಬಗೆಬಗೆಯಾಗಿ, ಹಾರಿ, ನೆಗೆದು, ಕುಣಿದು, ಹೈ ಜಂಪ್ ಲಾಂಗ ಜಂಪ್‌ಗಳನ್ನು ಮಾಡುವ ಭರದಲ್ಲಿ ಎದ್ದು ಬಿದ್ದು, ಮಡಿಯನ್ನು ಆಚರಿಸುತ್ತಿರುವವರ ನಾಟ್ಯಭಂಗಿಗಳನ್ನು ಕಂಡೇ ಪುರಂದರ ದಾಸರು, ರೋಸಿ ಹೋಗಿ "ಮಡಿ ಮಡಿ ಮಡಿಯೆಂದಡಿಗಡಿಗೆ